**ಅ. ದಾ. ಸಂ. ಃ168/2022**
**ಪಿ.ಡಬ್ಲ್ಯೂ ಃ 01**

**ದಿನಾಂಕ ಃ 29–10–2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ– ವಾದಿಯ ಪರ ಶ್ರೀ. ಜಿ ಎನ್ ವಕೀಲರಿಂದ** ಃ–

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರವನ್ನು ವಕೀಲರಿಗೆ ನಾನು ಹೇಳಿ ಬರೆಯಿರುತ್ತೇನೆ. ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನನ್ನ ಪರವಾಗಿ ಗುರುತಿಸಲು ಕೇಳಿಕೊಳ್ಳುತ್ತೇನೆ.

ದಿನಾಂಕ 03.11.2006 ರ ಶುದ್ಧ ಕ್ರಯದ ಕರಾರುಪತ್ರವನ್ನು ಹಾಜರು ಪಡಿಸಿದ್ದು ನಿಪಿ–1 ಎಂದು ಗುರುತಿಸಲಾಯಿತು. ದಿನಾಂಕ 08.08.2020 ರಂದು ಪ್ರತಿವಾದಿಗಳಿಗೆ ನೀಡಿದ ಕಾನೂನು ತಿಳುವಳಿಕೆಯನ್ನು ಹಾಜರು ಪಡಿಸಿದ್ದು ನಿಪಿ–2 ಎಂದು ಗುರುತಿಸಲಾಯಿತು. ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು ನಿಪಿ–3 , ನಿಪಿ–4, ನಿಪಿ–5 ಮತ್ತು ನಿಪಿ–6 ಎಂದು ಗುರುತಿಸಲಾಯಿತು. ಆರ್ ಪಿ ಎಡಿ ಕವರ್ ಗಳನ್ನು ಹಾಜರು ಪಡಿಸಿದ್ದು ನಿಪಿ–7, ನಿಪಿ–8, ನಿಪಿ–9, ನಿಪಿ–10 ಮತ್ತು ನಿಪಿ–11 ಎಂದು ಗುರುತಿಸಲಾಯಿತು. ಅಸಲು ದಾವೆ ನಂ.234/2020 ರ ಧೃಡೀಕೃತನಕಲಿನ ಆದೇಶದ ಪ್ರತಿಗಳನ್ನು ಹಾಜರು ಪಡಿಸಿದ್ದು ನಿಪಿ–12 ಎಂದು ಗುರುತಿಸಲಾಯಿತು. ಫೋಟೋ ಮತ್ತು ಸಿ.ಡಿ ಹಾಜರು ಪಡಿಸಿದ್ದು ನಿಪಿ–13 , ನಿಪಿ–14 ಮತ್ತು ನಿಪಿ–15 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**